**OS-126-2021**
**PW-1**

<u>**ದಿನಾಂಕಃ 04.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಪಿ ಎಸ್ **ವಕೀಲರಿಂದಃ**</u>

ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸದರಿ ಭಾವ ಚಿತ್ರದಲ್ಲಿರುವ ಮನೆಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ನಿಡಿ-1 ರ ಮನೆಯ ಪೂರ್ವ ಭಾಗದಲ್ಲಿ ನಾನು ಮತ್ತು ಪಶ್ಚಿಮಾರ್ಧ ಭಾಗದಲ್ಲಿ 1 ನೇ ಪ್ರತಿವಾದಿಯು ಬೇರೆ ಬೇರೆಯಾಗಿ ವಾಸಿಸುತ್ತಿದ್ದೇವೆ. ಸದರಿ ಮನೆಯು ಪೂರ್ವ-ಪಶ್ಚಿಮವಾಗಿ 80 ಅಡಿ, ಉತ್ತರ-ದಕ್ಷಿಣವಾಗಿ 100 ಅಡಿ ಇದೆ ಎಂದರೆ ಸರಿ. ಸದರಿ ನಿಡಿ-1 ರ ಮನೆಗೆ ಪ್ರತ್ಯೇಕ ಪ್ರತ್ಯೇಕ ಜಂಜರ್ ನಂಬರ್ ನೀಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಮಹದೇವಯ್ಯರವರ ಜೀವಿತಾವಧಿಯಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗವಾಗಿ 1994 ಕ್ಕಿಂತ ಪೂರ್ವದಿಂದಲೂ ನಾನು ಮತ್ತು 1 ನೇ ಪ್ರತಿವಾದಿಯು ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ ಎಂದರೆ ಸಾಕ್ಷಿದಾರರು ನನ್ನ ತಂದೆ ಮಹದೇವಯ್ಯರವರು ಮರಣ ಹೊಂದಿದ ನಂತರ ನಾನು ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಡಿ-1 ರ ಭಾವ ಚಿತ್ರದಲ್ಲಿ ಕಾಣುವ ಮನೆಯಲ್ಲಿ 2 ನೇ ಪ್ರತಿವಾದಿಗೆ ಯಾವುದೇ ಭಾಗ ನೀಡಿರುವುದಿಲ್ಲ. ಸಾಕ್ಷಿದಾರರು ಮುಂದುರವರೆದು ಯಾವುದೇ ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರ ಭಾವ ಚಿತ್ರದಲ್ಲಿ ಕಾಣುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ನಡುವೆ ಸುಮಾರು 10-15 ವರ್ಷಗಳಿಂದ ಸರಿಯಾಗಿ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯು ತಮ್ಮ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿಯಿಂದ ಭಾಗ ಕೇಳಿರುವುದಿಲ್ಲ. ನನ್ನ ತಂದೆಯ ಜೀವಿತಾವಧಿಯಲ್ಲಿ ನಾನು ಸಹ 1 ನೇ ಪ್ರತಿವಾದಿಯವರನ್ನು ಭಾಗ ಕೊಡುವಂತೆ ಕೇಳಿರುವುದಿಲ್ಲ. 1994 ರಲ್ಲಿ ನನ್ನ ತಂದೆ ಮಹದೇವಯ್ಯ ಮತ್ತು 1 ನೇ ಪ್ರತಿವಾದಿಯ ನಡುವೆ ಎಲ್ಲಾ ಆಸ್ತಿಗಳ ವಿಚಾರವಾಗಿ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಸದರಿ 1994 ರ ವಿಭಾಗ ಪತ್ರದಂತೆ ನಿಡಿ-1 ರಲ್ಲಿ ಕಾಣುವ ಮನೆಯಲ್ಲಿ ಪೂರ್ವಾರ್ಧಭಾಗ ನನ್ನ ತಂದೆಗೆ ಮತ್ತು ಪಶ್ಚಿಮಾರ್ಧಭಾಗ 1 ನೇ

ಪ್ರತಿವಾದಿಯ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ 1994 ರ ವಿಭಾಗ ಪತ್ರದಂತೆ ದಾವಾ 2 ನೇ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. 1998 ರ ಇಸವಿಯಲ್ಲಿ ಸರ್ಕಾರದ ಆಶ್ರಯ ಯೋಜನೆಗೆ 1 ನೇ ಪ್ರತಿವಾದಿಯು ಆಯ್ಕೆಯಾಗಿದ್ದರು ಎಂದರೆ ಸರಿಯಲ್ಲ. ಸದರಿ ಆಶ್ರಯ ಯೋಜನೆಗೆ 1 ನೇ ಪ್ರತಿವಾದಿಯು ಆಯ್ಕೆಯಾಗಿ ಗುರುತಿನ ಚೀಟಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಿನಾಂಕ 05.06.1999 ರಲ್ಲಿ 1 ನೇ ಪ್ರತಿವಾದಿಯು ಪಂಚಾಯತಿಯಿಂದ ಪರವಾನಗಿ ಪಡೆದುಕೊಂಡು ದಾವಾ 2 ನೇ ಅನುಸೂಚಿ ಸ್ವತ್ತಿನಲ್ಲಿ ತಳಹದಿ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. 1994 ರಿಂದಲೂ ದಾವಾ 2 ನೇ ಅನುಸೂಚಿ ಸ್ವತ್ತಿನ ಖಾತೆಯು 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ. ದಾವಾ 2 ನೇ ಅನುಸೂಚಿ ಸ್ವತ್ತಿಗೆ 1 ನೇ ಪ್ರತಿವಾದಿಯು 1994 ರಿಂದಲೂ ಕಂದಾಯ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ 2 ನೇ ಅನುಸೂಚಿ ಸ್ವತ್ತಿಗೆ ಗ್ರಾಮ ಪಂಚಾಯತಿಯವರು 1 ನೇ ಪ್ರತಿವಾದಿಯ ಹೆಸರಿಗೆ ಇ-ಸ್ವತ್ತನ್ನು ವಿತರಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಎಲ್ಲಾ ವಿಚಾರಗಳು ನನ್ನ ತಂದೆಗೆ ತಿಳಿದಿದ್ದರಿಂದ ದಾವಾ ಅನುಸೂಚಿ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ದಾವೆ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ.

ದಾವಾ 1 ನೇ ಅನುಸೂಚಿ ಸ್ವತ್ತು ನಮ್ಮ ಕುಟುಂಬದ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ದಾವಾ 1 ನೇ ಅನುಸೂಚಿ ಸ್ವತ್ತನ್ನು ನನ್ನ ತಂದೆ ಮತ್ತು ನನ್ನ ತಾತ ಜಂಟಿಯಾಗಿ ಮಲ್ಲೇಗೌಡ ಮತ್ತು ರಾಜೇಶ್ ರವರಿಂದ 2006 ನೇ ಇಸವಿಯಲ್ಲಿ ಖರೀದಿಸಿರುತ್ತಾರೆ. ಸದರಿ ದಾವಾ 1 ನೇ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನಿಪಿ-4 ರ ಕ್ರಯ ಪತ್ರದಲ್ಲಿ ನನ್ನ ತಂದೆ ಮತ್ತು ನನ್ನ ತಾತನ ಹೆಸರು ನಮೂದಾಗಿಲ್ಲ ಎಂದರೆ ಸರಿ. ದಾವಾ 1 ನೇ ಅನುಸೂಚಿ ಸ್ವತ್ತನ್ನು 1 ನೇ ಪ್ರತಿವಾದಿಯು ತಮ್ಮ ಸ್ವಂತ ದುಡಿಮೆಯ ಹಣದಿಂದ ಸ್ವಯಾರ್ಜಿತವಾಗಿ ಸಂಪಾದಿಸಿದ ಆಸ್ತಿ ಎಂದರೆ ಸರಿಯಲ್ಲ. ನನ್ನ ತಾತ ಗೂಳಯ್ಯರವರು 2013 ರವರೆಗೂ ಬದುಕಿದ್ದರು ಎಂದರೆ ಸರಿ. ನಮ್ಮ ತಾತನ ಜೀವಿತಾವಧಿಯಲ್ಲಿ ಮನೆಯ ಎಲ್ಲಾ ವ್ಯವಹಾರಗಳನ್ನು ನನ್ನ ತಾತರವರೇ ನೋಡಿ ಕೊಳ್ಳುತಿದ್ದರು ಎಂದರೆ ಸರಿ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮನೆಯ ಹಿರಿಯ ವ್ಯಕ್ತಿಯ ಹೆಸರಿಗೆ ಆಸ್ತಿಗಳನ್ನು ಖರೀದಿಸುತ್ತಾರೆ ಎಂದರೆ ಸರಿ. ಒಂದು ವೇಳೆ ನಾನು ಹೇಳಿದಂತೆ ನನ್ನ ತಂದೆ ಮತ್ತು ನನ್ನ ತಾತನ ಆದಾಯದಿಂದ ದಾವಾ 1 ನೇ ಅನುಸೂಚಿ ಸ್ವತ್ತನ್ನು ಖರೀದಿಸಿದ್ದರೆ ಸದರಿ ಕ್ರಯ ಪತ್ರವನ್ನು ನನ್ನ ತಾತನ ಹೆಸರಿಗೆ ಬರೆಸುತ್ತಿದ್ದರು ಎಂದರೆ ಸಾಕ್ಷಿದಾರರು 1 ನೇ

ಪ್ರತಿವಾದಿಯು ಹಿರಿಯ ಮಗನಾದ್ದರಿಂದ ದಾವಾ 1 ನೇ ಅನುಸೂಚಿ ಸ್ವತ್ತನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ತಾತನ ಜೀವಿತಾವಧಿಯಲ್ಲಿ ಸದರಿಯವರು ದಾವಾ 1 ನೇ ಅನುಸೂಚಿ ಸ್ವತ್ತಿನ ಕ್ರಯ ಪತ್ರವನ್ನು ಎಂದಿಗೂ ಪ್ರಶ್ನಿಸಿರುವುದಿಲ್ಲ. ದಾವಾ 1 ನೇ ಅನುಸೂಚಿ ಸ್ವತ್ತನ್ನು 1 ನೇ ಪ್ರತಿವಾದಿಯು ಸ್ವಯಾರ್ಜಿತ ಸಂಪಾದನೆಯಿಂದ ಖರೀದಿಸಿದ ಆಸ್ತಿಯಾಗಿದ್ದರಿಂದ ನನ್ನ ತಂದೆ ಮತ್ತು ನನ್ನ ತಾತರವರು ದಾವಾ 1 ನೇ ಅನುಸೂಚಿ ಸ್ವತ್ತಿನ ಕ್ರಯ ಪತ್ರವನ್ನು ಪ್ರಶ್ನೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

2019 ರಲ್ಲಿಯೂ ಸಹ 1 ನೇ ಪ್ರತಿವಾದಿಯು ಪಂಚಾಯತಿಯಿಂದ ಪರವಾನಗಿ ಪಡೆದುಕೊಂಡು ದಾವಾ 2 ನೇ ಅನುಸೂಚಿ ಸ್ವತ್ತಿನಲ್ಲಿ ಮನೆಯನ್ನು ನಿರ್ಮಿಸಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. 2022 ರಲ್ಲಿಯೂ ಸಹ 1 ನೇ ಪ್ರತಿವಾದಿಯು ಪಂಚಾಯತಿಯಿಂದ ಪರವಾನಗಿ ಪಡೆದುಕೊಂಡು ದಾವಾ 2 ನೇ ಅನುಸೂಚಿ ಸ್ವತ್ತಿನಲ್ಲಿ ಮನೆಯನ್ನು ನಿರ್ಮಿಸಲು ಪ್ರಯತ್ನಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಸದರಿ ಭಾವ ಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ನಿಡಿ-2 ರಲ್ಲಿ ಕಾಣುವ ಮಹಿಳೆ ನನ್ನ ತಾಯಿ. ಸದರಿ ನಿಡಿ-2 ರ ಭಾವ ಚಿತ್ರದಲ್ಲಿ ಕಾಣುವ ನಿವೇಶನದಲ್ಲಿ 1 ನೇ ಪ್ರತಿವಾದಿಯು ಕಟ್ಟಡವನ್ನು ನಿರ್ಮಿಸಲು ಶುರು ಮಾಡಿದಾಗ ನಾವುಗಳು ತೊಂದರೆ ನೀಡಿದ್ದರಿಂದ 1 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆ 195/2021 ನ್ನು ನಮ್ಮ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿದಾರರು ದಾವೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದ್ದ ಖಾತೆಯನ್ನು ರದ್ದುಗೊಳಿಸುವಂತೆ ಕೋರಿ ನಾನು ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯ ಮೇರೆಗೆ ಗ್ರಾಮ ಪಂಚಾಯತಿಯವರು 1 ನೇ ಪ್ರತಿವಾದಿಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿ ನನ್ನ ಅರ್ಜಿಯ ಮೇರೆಗೆ ಗ್ರಾಮ ಪಂಚಾಯತಿಯವರು ನನಗೆ ಹಿಂಬರಹ ನೀಡಿದ್ದರು ಎಂದರೆ ಸರಿ. ಸದರಿ ಹಿಂಬರಹದ ಮೇರೆಗೆ ನಾನು ತಾಲ್ಲೂಕು ಕಾರ್ಯ ನಿರ್ವಹಣಾ ಅಧಿಕಾರಿಗಳಲ್ಲಿ ಮೇಲ್ಮನವಿ ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ನನ್ನ ಮೇಲ್ಮನವಿಯ ಮೇರೆಗೆ ಸದರಿ ಕಾರ್ಯ ನಿರ್ವಹಣಾ ಅಧಿಕಾರಿಗಳು ದಿನಾಂಕ 23.03.2021 ರಂದು ಸದರಿ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹಿಂಬರಹ ನೀಡಿದ್ದರು ಎಂದರೆ ಸರಿಯಲ್ಲ. ತದನಂತರ ನನ್ನ ಮೇಲ್ಮನವಿಯು ಮುಕ್ತಾಯಗೊಂಡಿದ್ದರೂ ಸಹ ನಾನು

ನನ್ನ ಪ್ರಭಾವವನ್ನು ಬಳಸಿ ದಿನಾಂಕ 03.05.2021 ರಂದು ನಿಪಿ-8 ಮತ್ತು 10 ರಂತೆ ಆದೇಶ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಪಿ-8 ಮತ್ತು 10 ರ ಆದೇಶದಂತೆ ನಾನು ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ ನಿಪಿ-5 ಮತ್ತು 6 ರಂತೆ ಖಾತೆ ಬದಲಾಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ 2 ನೇ ಅನುಸೂಚಿ ಸ್ವತ್ತು 1994 ರಲ್ಲಿ ಬಾಯಿ ಮಾತಿನ ವಿಭಾಗದ ಮೂಲಕ 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದರಿಂದ ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ತಂದೆಯಾಗಲೀ ಅಥವಾ ನನ್ನ ತಾತರವರಾಗಲೀ ದಾವಾ 1 ನೇ ಅನುಸೂಚಿ ಸ್ವತ್ತನ್ನು ಖರೀದಿಸಲು ಯಾವುದೇ ಹಣವನ್ನು 1 ನೇ ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ.

ವಡೆಯಾಂದಳ್ಳಿ ಗ್ರಾಮದ ಸರ್ವೆ ನಂಬರ್ 295 ರಲ್ಲಿ ನಮ್ಮ ಕುಟುಂಬಕ್ಕೆ ಸರ್ಕಾರದಿಂದ ಇನಾಮ್ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್ 295 ರ ಜಮೀನನ್ನು ನನ್ನ ತಂದೆ ಮತ್ತು 1 ನೇ ಪ್ರತಿವಾದಿಯು 1994 ರಲ್ಲಿ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಅವಿವಾಹಿತೆ ಎಂದರೆ ಸರಿ. 2 ನೇ ಪ್ರತಿವಾದಿಯು ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ಉಪನ್ಯಾಸಕರಾಗಿದ್ದರಿಂದ ತನಗೆ ಆಸ್ತಿಗಳಲ್ಲಿ ಯಾವುದೇ ಭಾಗ ಬೇಡ ಎಂದು 1994 ರಲ್ಲಿ ತಿಳಿಸಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರ ಪಾಲನೆ, ಪೋಷಣೆ ಮತ್ತು ವಿದ್ಯಾಭ್ಯಾಸವನ್ನು 1 ನೇ ಪ್ರತಿವಾದಿಯು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ್ 295 ರ ಜಮೀನನ್ನು ಮತ್ತು ನಿಡಿ-1 ರ ಭಾವ ಚಿತ್ರದಲ್ಲಿ ಕಾಣುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. 1994 ರಲ್ಲಿಯೇ ವಿಭಾಗವಾಗಿದ್ದರೂ ಸಹ 1 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1994 ರಲ್ಲಿಯೇ ವಿಭಾಗವಾಗಿದ್ದರಿಂದ ನಾನಾಗಲೀ ಅಥವಾ ಇತರ ವಾದಿಗಳು ಆಗಲೀ 1 ನೇ ಪ್ರತಿವಾದಿಯವರನ್ನು ಬೇಟಿ ಮಾಡಿ ಭಾಗ ನೀಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ದಾವಾ 1 ಮತ್ತು 2 ನೇ ಅನುಸೂಚಿ ಸ್ವತ್ತುಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ ನಮಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಅಥವಾ ಭಾಗ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇರುವುದಿಲ್ಲ.

**OS-126-2021**
**PW-1**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ